ದಿನಾಂಕಃ 21-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ</u> ಪ್ರತಿವಾದಿ 1 ರವರ ಪರ ಶ್ರೀ ಆರ್.ಎನ್.ಎಚ್ ವಕೀಲರಿಂದಃ**

**37**. ನನ್ನ ತಾಯಿಯ ತಂದೆ ಮೃತ ಪಟ್ಟಿರುತ್ತಾರೆ. ಮಹಾಬಲೇಶ್ವರ ವೆಂಕಣ್ಣ ವೈಧ್ಯ ರವರು ನನ್ನ ಸೋದರ ಮಾವ. ನನ್ನ ತಾಯಿಗೆ ಅಕ್ಕ ಹಾಗೂ ತಂಗಿ ಕೂಡ ಇದ್ದಾರೆ. ನನ್ನ ತಾಯಿಯ ಅಕ್ಕ ತೆಲಂಗಾಣದಲ್ಲಿ ವಾಸ ಇದ್ದು, ಅವರ ತಂಗಿ ಕುಮಟಾದಲ್ಲಿ ವಾಸ ಇದ್ದಾರೆ. ನನ್ನ ತಾಯಿ ಹಾಗೂ ಅವರ ನಡುವೆ ಸಂಬಂಧ ಚೆನ್ನಾಗಿ ಇದೆ. ಅವರ ಮಧ್ಯೆ ಹಣದ ವ್ಯವಹಾರ ಇಲ್ಲ. ನನ್ನ ತಾಯಿಯ ಹಾಗೂ ಅವರ ಸಹೋದರ ಮಹಾಬಲೇಶ್ವರ ವೆಂಕಣ್ಣ ವೈಧ್ಯರವರಿಗೆ ಸಂಬಂಧ ಚೆನ್ನಾಗಿ ಇಲ್ಲ ಎಂದರೆ ಸರಿ. ನನ್ನ ತಾಯಿ ಅವರ ತವರು ಮನೆಯಿಂದ ಹಣ ತರುವುದಿಲ್ಲ ಎಂದರೆ ಸರಿ. ಯಲ್ಲಾಪುರ ಪಟ್ಟಣ ಪಂಚಾಯತಿ, ವಾರ್ಡ ನಂಬರ್ 3 ರಲ್ಲಿರುವ RCC ಕಟ್ಟಡ ವನ್ನು ನನ್ನ ತಾಯಿ ಖರೀದಿಸಿದ್ದಾರೆ ಎಂದರೆ ಸರಿ. ಅದನ್ನು ಸುಮಾರು 25 ವರ್ಷದ ಹಿಂದೆ ಖರೀದಿಸಿದ್ದಾರೆ. ನನ್ನ ತಾಯಿಗೆ ಬೇರೆ ನೌಕರಿ ಇಲ್ಲ ಎಂದರೆ ಸರಿ. ಮೇಲೆ ಹೇಳಿದಂತಹ RCC ಕಟ್ಟಡ ಹಾಗೂ ಆ ಕಟ್ಟಡ ಇರುವ ಜಮೀನು ಸುಮಾರು 70 ಲಕ್ಷ ಬೆಲೆ ಬಾಳಬಹುದು. ಆ ಮನೆಯಲ್ಲಿ ನಾನು ಹೋಗಿ ಉಳಿದಿದ್ದೆ. ಆ ಕಟ್ಟಡದಲ್ಲಿ ಚಿಕ್ಕದಾಗಿ ಒಂದು ಹಾಲ್, ಒಂದು ರೂಮ ಹಾಗೂ ಒಂದು ಅಡಿಗೆ ಮನೆ ಇದೆ. ಆ ಕಟ್ಟಡ ಯಲ್ಲಾಪುರ ಬಸ್ ನಿಲ್ದಾಣಕ್ಕೆ ಹತ್ತಿರದಲ್ಲಿದೆ ಎಂದರೆ ಸರಿ. ಆ ರೀತಿ ಆ ಕಟ್ಟಡ ಇರುವ ಜಾಗ ಯಲ್ಲಾಪುರ ಪೇಟೆಯ ಹೃದಯ ಭಾಗದಲ್ಲಿರುವುದರಿಂದ ಒಂದು ಗುಂಟೆಗೆ ರೂ. 40 ರಿಂದ 50 ಲಕ್ಷ ಇದೆ ಎಂದರೆ ಸಾಕ್ಷಿ ಒಂದು ಗುಂಟೆ ಗೆ ಸುಮಾರು ರೂ. 15 ರಿಂದ 20 ಲಕ್ಷ ಇರಬಹುದು ಎಂದು ನುಡಿಯುತ್ತಾರೆ. ಆ ಕಟ್ಟಡದಲ್ಲಿ ಕೆಳಗಡೆ ಶಿವಪ್ರಸಾದ ರವರು ಹಾಗೂ ಮೇಲ್ಗಡೆ ಇಬ್ಬರು ಬಾಡಿಗೆಗೆ ಇದ್ದಾರೆ ಎಂದರೆ ಸಾಕ್ಷಿ ಈಗ ಖಾಲಿ ಇದೆ ಎಂದು ನುಡಿಯುತ್ತಾರೆ. ಆ ಕಟ್ಟಡ ಕಟ್ಟುವಾಗ 1 ನೇ ಪ್ರತಿವಾದಿ ಕೂಡ ಹೋಗಿ

ಸಹಕಾರ ಮಾಡಿದ್ದಾರೆ ಎಂದರೆ ಸರಿ. ಆ ಕಟ್ಟಡ ಇರುವ ಜಾಗ ವನ್ನು ನನ್ನ ತಂದೆಯ ಒಟ್ಟು ಕುಟುಂಬದ ಆಸ್ತಿಯ ಉತ್ಪನ್ನದಿಂದ ಖರೀದಿಸಿದ್ದು, ಎಂದರೆ ಸಾಕ್ಷಿ ನನ್ನ ತಾಯಿಯ ಹಣದಿಂದ ಖರೀದಿಸಿದ್ದು ಎಂದು ನುಡಿಯುತ್ತಾರೆ. ನನ್ನ ತಾಯಿಗೆ ತಂದೆಯವರು ಮೃತ ಪಟ್ಟ ಬಾಬ್ತು ಬಂದ ಮೋಟಾರು ವಾಹನ ಇನ್ಸೂರೆನ್ಸ್ ಹಣದಿಂದ ಹಾಗೂ ಅಡಿಕೆ ಸುಲಿದು ಹಣ ಸಂಪಾದಿಸಿರುವುದು ಅವರ ಬಳಿ ಇದ್ದ ಹಣವಾಗಿರುತ್ತದೆ. ನನ್ನ ತಾಯಿಯವರು ಯಾರ ಮನೆಯಲ್ಲಿ ಹೋಗಿ ಅಡಿಕೆ ಸುಲಿಯುತ್ತಿದ್ದರು ಎಂದು ಗೊತ್ತಿಲ್ಲ. ನನ್ನ ಹಾಗೂ ನನ್ನ ತಾಯಿಯ ನಡುವೆ ಸಂಬಂಧ ಚೆನ್ನಾಗಿ ಇದೆ. ನಾನು ತಾಯಿಯಲ್ಲಿ ಯಾರ ಮನೆಯಲ್ಲಿ ಹಾಗೂ ಯಾವ ವರ್ಷದಲ್ಲಿ ಅಡಿಕೆ ಸುಲಿಯುತ್ತಿದ್ದರು ಎಂದು ಕೇಳಿರುವುದಿಲ್ಲ. ಯಾವ ವರ್ಷದಲ್ಲಿ ನಾನು ಮೇಲೆ ಹೇಳಿದ ಇನ್ಸೂರೆನ್ಸ್ ಹಣ ತಾಯಿಗೆ ಬಂದಿದ್ದು ಎಂದು ಗೊತ್ತಿಲ್ಲ.

**38**. ದಾವಾ ಬಿ ಸ್ವತ್ತಿನಲ್ಲಿ ಹೇಳಿರುವ ಗೋದಾಮು ಕಟ್ಟಡವನ್ನು ಯಾವ ಹಣದಿಂದ ಕಟ್ಟಿದ್ದು ಎಂದು ಗೊತ್ತಿಲ್ಲ. ನಿಪಿ–7 ರಲ್ಲಿ ಹೇಳಿರುವ ದಾವೆಯನ್ನು ಸಲ್ಲಿಸಿದಾಗ ಅದರ 1 ನೇ ಪ್ರತಿವಾದಿಯಾದ ನನ್ನ ಅಜ್ಜ ಚಿದಂಬರ ರಾಮಾ ಹೆಗಡೆ ಯವರು ಏನು ಉದಾಹರಣೆ ಹಾಕಿದ್ದಾರೆ ಎಂದು ಗೊತ್ತಿಲ್ಲ. ಆ ದಾವೆಯಲ್ಲಿ 8 ನೇ ಪ್ರತಿವಾದಿಯಾಗಿರುವ ನನ್ನ ತಾಯಿ ಯಾವ ಮೂಲದಿಂದ ಆ ಮೇಲೆ ಹೇಳಿದ ಗೋದಾಮು ವನ್ನು ಕಟ್ಟಿದ್ದಾರೆ ಎಂದು ಹೇಳಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಚಿದಂಬರ ರಾಮಾ ಹೆಗಡೆ ರವರ ಉದಾಹರಣೆಯಲ್ಲಿ ಆ ಗೋದಾಮು ಒಟ್ಟು ಕುಟುಂಬದ ಆದಾಯ ದಿಂದ ಕಟ್ಟಿದ್ದಾರೆ ಎಂದು ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–7 ನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಕುಮಟಾ ನ್ಯಾಯಾಲಯದಲ್ಲಿ ಹಾಕಿದ ದಾವೆಯನ್ನು ನಾನು ಪರಿಶೀಲಿಸಿಲ್ಲ ಎಂದು ನುಡಿಯುತ್ತಾರೆ. ನಿಪಿ–7 ರಿಂದ 14 ರಲ್ಲಿ ಏನು ಹೇಳಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ನಾನು ಅದರಲ್ಲಿ ಹಾಜರಾಗಿಲ್ಲ ಎಂದು ನುಡಿಯುತ್ತಾರೆ.

**39**. ನನ್ನ ತಾಯಿ ಇನ್ಸೂರೆನ್ಸ್ ಹಣದಿಂದ ಎಷ್ಟು ಮನೆಗಳನ್ನು ಕಟ್ಟಿದ್ದಾರೆ ಎಂದರೆ ಸಾಕ್ಷಿ ಯಲ್ಲಾಪುರ ಒಂದು ಮನೆ ಮಾತ್ರ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. OS no. 6/2006 ರಲ್ಲಿ ಮೇಲೆ

ಹೇಳಿದಂತಹ ಗೋದಾಮು ವನ್ನು ಇನ್ಸೂರೆನ್ಸ್ ಹಣದಿಂದ ಕಟ್ಟಿದ್ದು ಎಂದು ನನ್ನ ತಾಯಿ ಪ್ರತಿಪಾದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಪ್ರತಿವಾದಿ 1 ಮತ್ತು 2 ರವರು ಅವರ ಉದಾಹರಣೆಯಲ್ಲಿ ಏನು ಪ್ರತಿಪಾದಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ನನ್ನ ವಾದ ಪತ್ರದಲ್ಲಿ ಯಲ್ಲಾಪುರದ ಆ ಕಟ್ಟಡ ನನ್ನ ತಾಯಿ ಇನ್ಸೂರೆನ್ಸ್ ಹಣದಿಂದ ಕಟ್ಟಿದ ಕಟ್ಟಡವಾಗಿದ್ದು ನನಗೆ ಅದರಲ್ಲಿ ಪಾಲು ಬೇಡ ಎಂದು ಹೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾನು ಹೇಳಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಯ ಉದಾಹರಣೆಯಲ್ಲಿ ಆ ಕಟ್ಟಡ ಇನ್ಸೂರೆನ್ಸ್ ಹಣದಿಂದ ಅವರು ಕಟ್ಟಿದ ಕಟ್ಟಡ ಎಂದು ಹೇಳಿದ್ದಾರಾ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಇನ್ಸೂರೆನ್ಸ್ ಹಣ ಎಷ್ಟು ಬಂತು ಎಂದು ಗೊತ್ತಿಲ್ಲ. ಯಾವ ವರ್ಷದಲ್ಲಿ ಬಂತು ಎಂದು ಗೊತ್ತಿಲ್ಲ. ಆ ಕಟ್ಟಡ ಇರುವ ಜಾಗವನ್ನು ಯಾವ ವರ್ಷ ದಲ್ಲಿ ಹಾಗೂ ಎಷ್ಟು ಮೊಬಲಗು ಗೆ ಖರೀದಿಸಿದರು ಎಂದು ಗೊತ್ತಿಲ್ಲ.

40. ನನ್ನ ತಾಯಿ ಯಲ್ಲಾಪುರ ನ್ಯಾಯಾಲಯದಲ್ಲಿ ವಕೀಲರಾದ M.K. Hegde ರವರ ಮೂಲಕ ಆ ಕಟ್ಟಡಕ್ಕೆ ಸಂಬಂಧಪಟ್ಟಂತೆ caveat ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಆ caveat ಅರ್ಜಿಯಲ್ಲಿ ಕೂಡ ನನ್ನ ತಾಯಿ ಇನ್ಸೂರೆನ್ಸ್ ಹಣದಿಂದ ಖರೀದಿಸಿ ಕಟ್ಟಿದ ಕಟ್ಟಡ ಎಂದು ಪ್ರತಿಪಾದಿಸಿಲ್ಲ ಎಂದರೆ ಸರಿ. ನನ್ನ ಪ್ರಕಾರ RCC ಕಟ್ಟಡವನ್ನು ಯಾವ ವರ್ಷದಲ್ಲಿ ಕಟ್ಟಿದ್ದು ಎಂದು ನೆನಪಿಲ್ಲ. ಆ ಕಟ್ಟಡ ಕಟ್ಟಲು ಎಷ್ಟು ಮೌಲ್ಯ ತಗಲಿದೆ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ಆ ಕಟ್ಟಡಕ್ಕೆ 4 ವಿದ್ಯುತ್ ಮೀಟರ್ ಗಳು ಇವೆ. ಆ 4 ವಿದ್ಯುತ್ ಮೀಟರ್ ಗಳು ನನ್ನ ತಾಯಿಯ ಹೆಸರಿನಲ್ಲಿ ಪ್ರತ್ಯೇಕವಾಗಿ ಇದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. 4 ಮೀಟರ್ ಗಳು ಇರುವಂತಹ ಕಟ್ಟಡದಲ್ಲಿ ತಲಾ ಒಂದರಂತೆ ಹಾಲ್ , ಅಡಿಗೆ ಕೋಣೆ ಹಾಗೂ ರೂಮ್ ಇವೆ ಎಂದರೆ ಸರಿ. ಸಾಮಾನ್ಯವಾಗಿ 10 ವರ್ಷಗಳಿಂದ ಆ ಕಟ್ಟಡದಲ್ಲಿ ಆ ರೀತಿ ಇರುವ ಪ್ರತ್ಯೇಕ 4 ಮೀಟರ್ ನ ರೂಮುಗಳು ಇವೆ. 10 ವರ್ಷದ ಹಿಂದಿನಿಂದಲೂ ಆ 4 ಮನೆಗಳು ಬಾಡಿಗೆದಾರರ ವಾಸ್ತವ್ಯದಲ್ಲಿ ಇತ್ತು

ಎಂದರೆ ಸಾಕ್ಷಿ ಒಬ್ಬರೆ ಹಾಗೂ ಎಲ್ಲಾ ಸಮಯದಲ್ಲಿ ಬಾಡಿಗೆಗೆ ಇರುತ್ತಿರಲಿಲ್ಲ ಹಾಗೂ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಎಷ್ಟು ಬಾಡಿಗೆದಾರರು ಆ ಮನೆಗಳಲ್ಲಿ ವಾಸ ಮಾಡಿ ಇದ್ದಾರೆ ಎಂದು ಗೊತ್ತಿಲ್ಲ. ಆ ಮನೆಗೆ ರೂ. 25 ಸಾವಿರ ಬಾಡಿಗೆ ಹಾಗೂ ರೂ. 2 ಲಕ್ಷ ಮುಂಗಡ ಹಣ ಪಡೆಯಲಾಗುತ್ತದೆ ಎಂದರೆ ಸಾಕ್ಷಿ ರೂ. 2 ರಿಂದ 3 ಸಾವಿರ ಬಾಡಿಗೆ ಹಾಗೂ ಮುಂಗಡ ಹಣ ರೂ. 10 ಸಾವಿರದ ಒಳಗೆ ಎಂದು ನುಡಿಯುತ್ತಾರೆ. ಆ ಮನೆಗಳ ಬಾಡಿಗೆ ಹಣವನ್ನು ನನಗಾಗಲಿ ಅಥವಾ 1 ನೇ ಪ್ರತಿವಾದಿಗಾಗಲಿ ತಾಯಿ ನೀಡಿಲ್ಲ ಎಂದರೆ ಸರಿ. ಸಾಕ್ಷಿ ಪುನಃ 1 ನೇ ಪ್ರತಿವಾದಿ ತೆಗೆದುಕೊಂಡಿದ್ದಾರಾ ಎಂದು ಗೊತ್ತಿಲ್ಲ , ಆದರೆ ನಾನು ಈ ತನಕ ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಆ ಕಟ್ಟಡ ಹಾಗೂ ಅದರ ಜಾಗವನ್ನು ನನ್ನ ತಾಯಿ ಕುಟುಂಬದ ಯಜಮಾನ ನಾತೆಯಿಂದ ಒಟ್ಟು ಕುಟುಂಬದ ಆಸ್ತಿಯ ಉತ್ಪನ್ನದಿಂದ ಖರೀದಿಸಿದ್ದು ಎಂದರೆ ಸರಿಯಲ್ಲ. ನಾನು ಹೇಳಿದಂತೆ 25 ವರ್ಷದ ಹಿಂದೆ ಖರೀದಿಸಿದ ಆಸ್ತಿ ಅಲ್ಲ ಎಂದರೆ ಸಾಕ್ಷಿ ನಾನು ಸುಮಾರು 25 ವರ್ಷದ ಹಿಂದೆ ಎಂದು ಹೇಳಿದ್ದೇನೆ ಹಾಗೂ ನನಗೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. 15 ವರ್ಷದ ಹಿಂದೆ ನನ್ನ ತಂದೆ ಮೃತ ಪಟ್ಟ ನಂತರ ಯಾವ ಸ್ವತ್ತಿನ ಅಡಿಕೆ ಉತ್ಪನ್ನದ ಹಣದಿಂದ ಖರೀದಿಸಿದ್ದು ಎಂದರೆ ಸರಿಯಲ್ಲ. ತಲಾ ರೂ 25 ಸಾವಿರದಂತೆ ತಿಂಗಳಿಗೆ 4 ಮನೆಗಳಿಂದ ನನ್ನ ತಾಯಿ ರೂ. 1 ಲಕ್ಷ ಬಾಡಿಗೆ ಹಣ ಪಡೆಯುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ಈ ತನಕ ರೂ. 15 ಕೋಟಿ ಬಾಡಿಗೆ ಹಣವನ್ನು ನನ್ನ ತಾಯಿ ಯೇ ಇಟ್ಟು ಕೊಂಡಿದ್ದಾರೆ ಎಂದರೆ ಸರಿಯಲ್ಲ.

**41.** ಅಡಿಕೆ ಉತ್ಪನ್ನವನ್ನು ನನ್ನ ತಮ್ಮನೆ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದನು. ಅದನ್ನು ನನ್ನ ತಾಯಿಯ ಹೆಸರನಲ್ಲಿ ಮಾರಾಟ ಮಾಡುತ್ತಿದ್ದನು. ಆ ಉತ್ಪನ್ನಗಳಲ್ಲಿ ಅರ್ಧ T.S.S ಗೆ ಹಾಗೂ

ಅರ್ಧ Omkar trading co ಗೆ ಮಾರಾಟ ಮಾಡುತ್ತಿದ್ದರು. ಆ ರೀತಿ ಮಾರಾಟದ ಉತ್ಪನ್ನದ ಹಣ ತಾಯಿಯ ಹೆಸರಿಗೆ ಜಮಾ ಆಗುತ್ತಿತ್ತು. ಸಾಕ್ಷಿ ಪುನಃ ಇಬ್ಬರ ಹೆಸರಿಗೆ ಜಮಾ ಆಗುತ್ತಿತ್ತು ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ಇಬ್ಬರ ಹೆಸರಿಗೂ ಹಣ ಜಮಾವಾಗಿತ್ತು ಎಂದು ಹೇಳಲು ತೊಂದರೆ ಇರಲಿಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಕೂಡ ಹಣ ಜಮೆ ಆಗಿರುವ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ನನ್ನ ತಾಯಿಯ ಹಸೆರಿನಲ್ಲಿ Omkar trading co ಗೆ 25 ವರ್ಷಗಳಿಂದ ಅಡಿಕೆ ಮಾರಾಟ ಮಾಡಲಾಗುತ್ತಿದೆ. TSS ಗೆ ಇತ್ತೀಚೆಗೆ 8 ವರ್ಷಗಳಿಂದ ಅಡಿಕೆ ಮಾರಾಟ ಮಾಡಲಾಗುತ್ತಿದೆ. ಕಳೆದ 25 ವರ್ಷಗಳಿಂದ ಎಷ್ಟು ಅಡಿಕೆ ಉತ್ಪನ್ನವನ್ನು ಮಾರಾಟ ಮಾಡಲಾಯಿತು ಎಂದು ಹೇಳಲಾಗುವುದಿಲ್ಲ. ನನ್ನ ತಾಯಿಯ ಹೆಸರಿನಲ್ಲಿ Omkar trading co ಯಲ್ಲಿ ಖಾತೆ ಇರುವುದನ್ನು ನೋಡಿದ್ದೇನೆ. ನನ್ನ ತಾಯಿಯ ಹೆಸರಿನಲ್ಲಿ ಬೇರೆ ಎಲ್ಲಿ ಖಾತೆಗಳು ಇವೆ ಎಂದು ನಾನು ನೋಡಿಲ್ಲ. ನನ್ನ ತಾಯಿಯ ಹೆಸರಿನಲ್ಲಿ ಇರುವ ಎಷ್ಟು ಖಾತೆಗಳು ನ್ಯಾಯಾಲಯಕ್ಕೆ ತರಿಸಲಾಯಿತು ಎಂದು ನಾನು ತಿಳಿದುಕೊಂಡಿಲ್ಲ. ನನ್ನ ತಾಯಿಯ ಹೆಸರನಲ್ಲಿ ಕೆನರಾ ಬ್ಯಾಂಕ್ , ಕೆನರಾ ಡಿಸ್ಟ್ರಿಕ್ಟ ಕೆಡಿಸಿಸಿ ಬ್ಯಾಂಕ್, ಕರ್ನಾಟಕ ಬ್ಯಾಂಕ್, ಯಲ್ಲಾಪುರ, ಅರ್ಬನ್ ಕೊ.ಅಪರೇಟಿವ್ ಬ್ಯಾಂಕ್, ವಿಕಾಸ ಕೊ.ಅಪರೇಟಿವ್ ಬ್ಯಾಂಕ್ ಖಾತೆಗಳು ಇವೆ ಎಂದರೆ ಸರಿ.

**42.** ಮೇಲ್ಕಂಡ ಎಲ್ಲಾ ಬ್ಯಾಂಕ್ ಖಾತೆಗಳಲ್ಲಿ ಅಡಿಕೆ ಯ ಮಾರಾಟದಿಂದ ಜಮಾ ಆದ ಹಣಗಳು ಎಂದು ದಾಖಲೆ ಇದೆ ಎಂದರೆ ಸರಿಯಲ್ಲ. ದಿನಾಂಕಃ 30-03-2022 ರಂದು ರೂ.12,08,741/- Omkar trading co ಖಾತೆಯಲ್ಲಿ ಜಮೆ ಆಗಿದೆ ಎಂದರೆ ಗೊತ್ತಿಲ್ಲ. ಸದ್ರಿ ಯಲ್ಲಾಪುರ ದ ಆಸ್ತಿ ಈ ದಾವೆಯಲ್ಲಿ ಸೇರಿಸಬೇಕಿದ್ದ ಆಸ್ತಿ ಎಂದರೆ ಸಾಕ್ಷಿ ಅದು ನನ್ನ ತಾಯಿಯ ಸ್ವಂತ ಆಸ್ತಿ ಅದು ನನಗೆ ಬೇಕಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯವರು ತೀರಿ ಹೋದ ಸಂದರ್ಭ ದಲ್ಲಿ ದಾವಾ ಸ್ವತ್ತಿನಲ್ಲಿ ಫಲಗಳು ಬರುತ್ತಿತ್ತಾ ಎಂದರೆ ಸಾಕ್ಷಿ ಆಗ ನನಗೆ 2 ವರ್ಷ ವಯಸ್ಸಾಗಿದ್ದುದರಿಂದ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ 25 ವರ್ಷದ ಹಿಂದೆ ದಾವಾ ಸ್ವತ್ತಿನಲ್ಲಿ ಫಲ ಬರುತ್ತಿರುವುದು

ಗೊತ್ತಾಯಿತು.  25 ವರ್ಷಗಳ ಹಿಂದಿನಿಂದ  ಅಡಿಕೆ ಫಸಲನ್ನು ಮಾರಾಟ ಮಾಡುವುದು ಹಾಗೂ ಅದರ ಹಣ ನನ್ನ ತಾಯಿಯ  ಹೆಸರಿಗೆ ಜಮಾ ಆಗುವುದು ಗೊತ್ತಿತ್ತಾ ಎಂದರೆ ಸಾಕ್ಷಿ ನನ್ನ ತಮ್ಮ ಅದನ್ನು ತೆಗೆದುಕೊಂಡು ಹೋಗಿ ಹಾಕುತ್ತಿದ್ದ ಹಾಗೂ ತಾಯಿಯವರು  ನೋಡಿಕೊಳ್ಳುತ್ತಿದ್ದದ್ದು ಅಷ್ಟೆ  ಹಾಗೂ ವ್ಯವಹಾರ ತಮ್ಮ ಮಾಡುತ್ತಿದ್ದ ಎಂದು ನುಡಿಯುತ್ತಾರೆ.  ಆ ಅಡಿಕೆ ಮಾರಾಟದ ಹಣ Omkar trading co ಯಲ್ಲಿ ಇರುವ ತಾಯಿ ಯ ಹೆಸರಿನ ಖಾತೆಗೆ ಜಮಾ ಆಗುತ್ತಿತ್ತು.   ತಾಯಿಯ ಖಾತೆಯಿಂದ 1 ನೇ ಪ್ರತಿವಾದಿ ಹೆಸರಿಗೆ ಹಾಗೂ ನನ್ನ ಹೆಸರಿನ ಖಾತೆಗೆ ಹಣ ವರ್ಗಾವಣೆ ಆಗಿಲ್ಲ ಎಂದರೆ ಸರಿ.  ಇಲ್ಲಿ ತನಕ ಅಡಿಕೆ ಮಾರಾಟದಿಂದ ನನ್ನ ತಾಯಿಯ ಖಾತೆಗೆ 4 ಕೋಟಿ ಹಣ 25 ವರ್ಷಗಳಿಂದ ಜಮೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಹಣವನ್ನು  ನನ್ನ ತಾಯಿ ಹಿಂಪಡೆದುಕೊಂಡು ತಾನು ಉಪಯೋಗಿಸಿಕೊಂಡು ನನಗಾಗಲಿ  ಅಥವಾ 1 ನೇ ಪ್ರತಿವಾದಿಗಾಗಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಆ ಹಣ ಈ ದಾವೆಯ ನಿರ್ಣಯಕ್ಕೆ ಅಗತ್ಯ ಹಣ ಎಂದು ತೋರಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಆ ಹಣ ಖರ್ಚಾಗಿ ಹೋಗಿದೆ ಎಂದು ನುಡಿಯುತ್ತಾರೆ.  ಆ ಖರ್ಚಾದ ಹಣದಲ್ಲಿ ನನಗೆ ಹಾಗೂ 1 ನೇ ಪ್ರತಿವಾದಿಗೆ ತಲಾ 1/3 ಅಂಶದ ಹಕ್ಕಿದೆ ಎಂದು ಹೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ   ಆ ಹಣದಿಂದಲೇ ಕೊಡ್ಲಗದ್ದೆ  ಯಲ್ಲಿ ಕಟ್ಟಿರುವ RCC ಮನೆಯನ್ನು ಕಟ್ಟಿರುವುದು ಎಂದು ನುಡಿಯುತ್ತಾರೆ. ಆ RCC ಮನೆ ಯಾವ ಸರ್ವೆ ನಂಬರದಲ್ಲಿ  ಹಾಗೂ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಆ ಮನೆಯನ್ನು  ನನ್ನ ತಾಯಿಯ ಹೆಸರಿನಲ್ಲಿ ಅಡಿಕೆ ಮಾರಾಟ ದಿಂದ  ಜಮೆಯಾದ ಹಣ ದಿಂದಲೇ ಕಟ್ಟಿದ್ದು ಎಂದು ದಾವೆಯಲ್ಲಿ ಹೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದು ಒಟ್ಟು ಕುಟುಂಬದ ಮನೆ ಎಂದು ಹೇಳಿರುವುದು ಎಂದು ನುಡಿಯುತ್ತಾರೆ.  ನನ್ನ ತಾಯಿಯೇ ಆ ಮನೆಯನ್ನು ಕಟ್ಟಿದ್ದು ಹಾಗೂ ಅವರ ಹೆಸರಿನಲ್ಲಿ ಇದೆ ಎಂದು ತೋರಿಸುವ ದಾಖಲೆಯನ್ನು ಹಾಜರು ಪಡಿಸಿಲ್ಲ.   ಆ ಮನೆಯನ್ನು 5 ವರ್ಷದ ಹಿಂದೆ ಕಟ್ಟಿರುವುದು.  ಆ ಮನೆಯನ್ನು ಕಟ್ಟಲು ಎಷ್ಟು ಖರ್ಚು ಬಿದ್ದಿದೆ ಎಂದರೆ ಸಾಕ್ಷಿ ಅಂದಾಜು ರೂ. 50 ಲಕ್ಷ  ಮೇಲೆ ಖರ್ಚಾಗಿದ್ದು , ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.  ಆ ಮನೆ ಒಟ್ಟು ಕುಟುಂಬದ ಆಸ್ತಿಯ ಉತ್ಪನ್ನದಿಂದ ಕಟ್ಟಿದ್ದು ಎಂದು ಹೇಳಿ ಗ್ರಾಮ ಪಂಚಾಯತಿಗೆ ಮನೆ

ನಂಬರ್ ನೀಡಲು ಅರ್ಜಿ ನೀಡಲಾಗಿದೆ. ಅಂತಹ ಅರ್ಜಿಯ ನಕಲನ್ನು ಹಾಜರು ಪಡಿಸಿಲ್ಲ. ಮನೆ ಕಟ್ಟುವ ಪರವಾನಿಗೆ ಯನ್ನು ನಾನು ಅಥವಾ ನನ್ನ ತಾಯಿ ಪಡೆದಿದ್ದೇವಾ ಎಂದರೆ ಸಾಕ್ಷಿ 1 ನೇ ಪ್ರತಿವಾದಿ ಪಡೆದಿದ್ದಾನಾ ಎಂದು ನನಗೆ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಾದ ಸರ್ವೆ ನಂಬರ್ 52/1+2 ರಲ್ಲಿ ಆ RCC ಮನೆ ಇದೆ ಎಂದರೆ ಸರಿ. 1 ನೇ ಪ್ರತಿವಾದಿ ಆ RCC ಕಟ್ಟಡವನ್ನು farm house ಎಂದು ಕಟ್ಟಲು ತಹಶೀಲ್ದಾರ ರಿಂದ ಅನುಮತಿ ಪಡೆದು ನಮ್ಮ ಒಪ್ಪಿಗೆಯ ಮೇರೆಗೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅವರ ಮೊಬೈಲ್ ಶಾಪ್ ನ ಸ್ವಂತ ಉತ್ಪನ್ನದಿಂದ ಆ RCC ಮನೆಯನ್ನು ಕಟ್ಟಿದ್ದು ಎಂದರೆ ಸರಿಯಲ್ಲ. ಆ ಮನೆಯನ್ನು ನಾನು ಹೇಳುವಂತೆ ಅಡಿಕೆ ಉತ್ಪನ್ನದಿಂದ ನನ್ನ ತಾಯಿ ಕಟ್ಟಿಸಿದ್ದು ಯಾವತ್ತು ಇಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ಗೊತ್ತಿದ್ದರೂ ಕೂಡ ನಾನು ಮತ್ತು ನನ್ನ ತಾಯಿ ಸೇರಿ ಸುಳ್ಳು ಸಾಧನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.